**ಎಂ ವಿ ಸಿ 1776/2023 ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿ: 04.08.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ ಎಸ್ ಎಂ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ ಕೆ ಪಿ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ನನ್ನ ಊರು ಬೆಳಗೊಳ. ಆನಂದ ಮತ್ತು ಮೃತ ಹರೀಶ ನನಗೆ ಗೊತ್ತು. ಅಪಘಾತ ಆದ ಸಂಗತಿಯನ್ನು ಆನಂದರವರಿಗೆ ನಾನೇ ದೂರವಾಣಿ ಮೂಲಕ ತಿಳಿಸಿದೆ. ನಾನು ಬೆಮಲ್ ಕಡೆಯಿಂದ ಅವರ ಹಿಂದೆಯೇ ಬರುತ್ತಿದ್ದೆ. ಅವರು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಆಗ ಸಮಯ 7.30 ರಿಂದ 8.00 ಗಂಟೆಯಾಗಿತ್ತು. ಕತ್ತಲು ಆಗಿತ್ತು ಎಂದರೆ ಸರಿ. ಮೃತ ಹರೀಶ ನನಗಿಂತ ಮುಂದೆ ಹೋಗುತ್ತಿದ್ದರು. ಸುಮಾರು ಅರ್ಧ ಕಿಲೋ ಮೀಟರ್ ನಿಂದ ಒಂದು ಕಿಲೋ ಮೀಟರ್ ದೂರದಲ್ಲಿ ಅವರು ಹೋಗುತ್ತಿದ್ದರು. ಶಶಿರವರು ನನ್ನ ಹಿಂದೆ ಬರುತ್ತಿದ್ದರು. ಅವರು ನನ್ನ ಹಿಂದೆ ಎಷ್ಟು ದೂರದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ.

ಗ್ಯಾಮನ್ ವೃತ್ತದಲ್ಲಿ ಮೃತ ಹರೀಶರವರು ಬಲಗಡೆಗೆ ತಿರುವು ಪಡೆದುಕೊಳ್ಳುತ್ತಿದ್ದಾಗ ಒಂದು ಕಾರು ಅವರಿಗೆ ಅಪಘಾತಪಡಿಸಿ ಹೊರಟು ಹೋಯಿತು. ನನಗೆ ಆ ಸದ್ದು ಕೇಳಿಸಿತು. ಆ ಕಾರು ಅತಿವೇಗವಾಗಿ ಹೊರಟು ಹೋಯಿತು. ಕತ್ತಲು ಇದ್ದ ಕಾರಣ ಕಾರಿನ ನೊಂದಣಿ ಸಂಖ್ಯೆಯನ್ನು ನೋಡಲು ಆಗಲಿಲ್ಲ. "ನಿನ್ನ ತಮ್ಮನಿಗೆ ಯಾವುದೋ ಕಾರು ಅಪಘಾತಪಡಿಸಿ ಹೊರಟು ಹೋಗಿದೆ ಎಂದು" ನಾನು ಮೃತ ಹರೀಶರವರ ಅಣ್ಣನಾದ ಆನಂದರವರಿಗೆ ತಿಳಿಸಿದೆ. ಅಪಘಾತವು ಗ್ಯಾಮನ್ ವೃತ್ತದಲ್ಲಿ ಸಂಭವಿಸಿತು. ಮೃತ ಹರೀಶರವರು ರಸ್ತೆಯ ಅಂಚಿನಲ್ಲಿದ್ದ ಮಣ್ಣಿನ ದಿಬ್ಬಕ್ಕೆ ಗುದ್ದಿಕೊಂಡು ಬಿದ್ದರು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಹೇಳಿರುವುದು ಸರಿಯಲ್ಲ, ಅದು ಮಣ್ಣಿನ ದಿಬ್ಬವಾಗಿರದೆ ಮೋರಿಯ

ಟ್ರಂಚ್ ಆಗಿತ್ತು. ಅಪಘಾತಪಡಿಸಿದ ಕಾರು ಗೋಲ್ಡ್ ಕಲ್ಲರ್ ಇದ್ದು ಅದು ಮಾರುತಿ ವ್ಯಾಗನರ್ ಆಗಿತ್ತು ಮತ್ತು ಅದು ವೇಗವಾಗಿ ಹೊರಟು ಹೋಗಿತ್ತು. ಆ ಸಮಯದಲ್ಲಿ ಸುಮಾರು 50 ರಿಂದ 100 ಅಡಿ ಅಂತರದಲ್ಲಿ ಅಂಗಡಿಗಳವರು ಇದ್ದರು. ನನ್ನ ಬಳಿ ಮಾರುತಿ ವ್ಯಾಗನರ್ ಇರುವ ಕಾರಣ ಅಪಘಾತಪಡಿಸಿದ ಕಾರನ್ನು ನಾನು ಸುಲಭವಾಗಿ ಗುರುತು ಹಿಡಿದೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಮೃತ ಹರೀಶರವರ ದೇಹದ ಹಲವು ಕಡೆ ಗಾಯಗಳಾಗಿ ಬಾಯಿ ಮತ್ತು ಮೂಗಿನಲ್ಲಿ ರಕ್ತ ಬರುತ್ತಿತ್ತು. ನಾನು ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ಅದರ ನೋಂದಣಿ ಸಂಖ್ಯೆಯ ಕೆಎ 53–ಹೆಚ್–1523. ನನ್ನ ವಾಹನದಲ್ಲಿ ನನೊಬ್ಬನೇ ಪ್ರಯಾಣ ಮಾಡುತ್ತಿದ್ದೆ. ಅಪಘಾತ ಸಂಭವಿಸಿದ ದಿನ ನನಗೆ ನೆನಪಿಲ್ಲ. ಅಂದು ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತಿದ್ದವು ಎಂದರೆ ಸರಿ. ಶನಿವಾರ ಮತ್ತು ಭಾನುವಾರ ಕೆ ಆರ್ ಎಸ್ ಗೆ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಹೋಗಿ ಬರುತ್ತವೆ ಎಂದರೆ ಸರಿ.

ಮೃತ ಹರೀಶರವರು ಯಮಹಾ ಬೈಕಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಮೃತ ಹರೀಶರವರ ಅಣ್ಣ ಸ್ಥಳಕ್ಕೆ ಬಂದು ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ನಾನು ಆಸ್ಪತ್ರೆಗೆ ಹೋಗಲಿಲ್ಲ. ಅಪಘಾತ ಆದ ಮರುದಿನವೇ ಪೊಲೀಸರು ನನ್ನನ್ನು ವಿಚಾರಣೆ ಮಾಡಿದರು. ದೂರನ್ನು ಯಾವ ದಿನಾಂಕದಂದು ನೀಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಮರು ದಿನ ನನ್ನನ್ನು ಸ್ಥಳ ಮಹಜರಿಗೆ ಕರೆದಿದ್ದರು. ಸ್ಥಳ ಮಹಜರು ಕಾಲದಲ್ಲಿ ರಸ್ತೆಯ ಪಕ್ಕದಲ್ಲಿ ಬಿದ್ದಿದ್ದ ನೋಂದಣಿ ಫಲಕವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. ಸದರಿ ನೋಂದಣಿ ಫಲಕವು ಪ್ಲಾಸ್ಟಿಕ್ ಆಗಿತ್ತು. ಅಪಘಾತ ನಡೆದ ಒಂದು ವಾರದ ನಂತರ ಕೆಎ 09 ಜೆಡ್ 1122 ವ್ಯಾಗನರ್ ಕಾರನ್ನು ಪೊಲೀಸರು ಅಮಾನತ್ತುಪಡಿಸಿಕೊಂಡರು. ಅಮಾನತ್ತು ಮಹಜರು ಕಾಲದಲ್ಲಿ ನಾನು ಹಾಜರಿದ್ದೆ. ಅಮಾನತ್ತು ಮಹಜರಿಗೆ ಸಹಿ ಮಾಡಿದ್ದೆನೋ ಇಲ್ಲವೋ ನೆನಪಿಲ್ಲ. ಆಗ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಆ ಕಾರನ್ನು ನಾನು ಕೆ ಆರ್ ಎಸ್ ಪೊಲೀಸ್ ಠಾಣೆಯಲ್ಲಿ ನೋಡಿದ್ದೆ. ಅಲ್ಲಿ ಮಹಜರು ಮಾಡಿದರು. ನಾನು ಕಾರನ್ನು ನೋಡಿದಾಗ ನೋಂದಣಿ ಫಲಕ ಇದ್ದ ಕಾರಿನ ಭಾಗವು ಸ್ವಲ್ಪ ಜಖಂ ಆಗಿತ್ತು.

ರಸ್ತೆಯ ಅಂಚಿನಲ್ಲಿ ಬಿದ್ದಿದ್ದ ನೋಂದಣಿ ಫಲಕದ ಆಧಾರದ ಮೇಲೆ ಸದರಿ ಕಾರು ಅಪಘಾತಪಡಿಸಿರಬಹುದು ಎಂದು ನಾನು ಪೊಲೀಸರಿಗೆ ತಿಳಿಸಿದೆ.

ಅಪಘಾತ ಆದ ನಂತರ ನಾನು ಕೃತ್ಯ ಸ್ಥಳಕ್ಕೆ ಹೋಗಿದ್ದೇನೆ ಎಂದರೆ ಸರಿಯಲ್ಲ. ಮೃತ ಹರೀಶರವರಿಗೆ ಯಾವ ಕಾರು ಡಿಕ್ಕಿಪಡಿಸಿತು ಮತ್ತು ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ನಾನು ಅಪಘಾತದ ಸದ್ದನ್ನು ಕೇಳಿಸಿಕೊಂಡೆ. ಮೃತ ಹರೀಶರವರು ವೇಗವಾಗಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಅಂಚಿನಲ್ಲಿದ್ದ ದಿಬ್ಬಕ್ಕೆ ಗುದ್ದಿಕೊಂಡಿರುವ ಕಾರಣ ಅಪಘಾತ ಉಂಟಾಗಿದೆ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಬರುವ ವೇಳೆಗಾಗಲೇ ಅಪಘಾತ ಸಮಯದಲ್ಲಿ ಮೃತ ಹರೀಶ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನವನ್ನು ಬೇರೆ ಯಾರೋ ಅಪಘಾತ ಸ್ಥಳದ ಒಂದು ಕಡೆ ನಿಲ್ಲಿಸಿದ್ದರು. ಸದರಿ ದ್ವಿಚಕ್ರ ವಾಹನವನ್ನು ನಾನು ಮರು ದಿನ ಮಹಜರು ಕಾಲದಲ್ಲಿ ನೋಡಿದೆ. ಅದರ ಮುಂಭಾಗದ ಲೈಟ್, ಇಂಡಿಕೇಟರ್ ಇತ್ಯಾದಿ ಜಖಂ ಆಗಿದ್ದವು. ಸದರಿ ದ್ವಿಚಕ್ರ ವಾಹನದ ಹಿಂಭಾಗದ ಇಂಡಿಕೇಟರ್ ಜಖಂ ಆಗಿತ್ತು. ಸದರಿ ದ್ವಿಚಕ್ರ ವಾಹನದ ಹಿಂಭಾಗದ ಮಡ್ ಗಾರ್ಡ್, ಟೈಯರ್ ಇತ್ಯಾದಿ ಜಖಂ ಆಗಿರಲಿಲ್ಲ. ಮೃತ ಹರೀಶರವರೇ ಬಿದ್ದು ಅಪಘಾತ ಮಾಡಿಕೊಂಡಿದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ನಾನು, 1 ನೇ ಎದುರುದಾರರು, ಪೊಲೀಸರು, ಅರ್ಜಿದಾರರು ಮತ್ತು ಇತರರು ಸೇರಿಕೊಂಡು ಸುಳ್ಳು ಸಂಗತಿಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪೊಲೀಸರು ಸಲ್ಲಿಸಿರುವ ಅಂತಿಮ ವರದಿಯಲ್ಲಿ ನನ್ನನ್ನು ಸಾಕ್ಷಿಯನ್ನಾಗಿ ಮಾಡಿಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**